ಹಾಕಿ ಮೊಹರು ಮಾಡು. ಅದರಲ್ಲಿ ನಮ್ಮ ಕುಟುಂಬಕ್ಕೆ ಅವಮಾನವಾಗುವಂತಹದ್ದು ಏನೂ ಇಲ್ಲ. ಆದರೂ, ನೀನು ಅಥವಾ ಫೀಲಿಕ್ಸ್ ಯಾವ ಕಾರಣಕ್ಕೂ ಈ ಕೋಣೆಗೆ ಹೋಗಬಾರದು. ನೀವಿರುವ ಮನೆಯನ್ನು ಮಾರುವ ಅಥವಾ ಬಾಡಿಗೆಗೆ ಕೊಡುವ ಹಾಗಿಲ್ಲ. ಆದರೆ, ಫೀಲಿಕ್ಸ್‌ಗೆ 21 ವರ್ಷ ತುಂಬಿದಾಗ ಮೊಹರನ್ನು ತೆಗೆದು ಒಳಗೆ ಹೋಗಬಹುದು.

ನಿನಗೆ ಏನಾದರೂ ಸಹಾಯ ಬೇಕಿದ್ದರೆ ಪರ್ಸಿವಲ್‌ನ ಕೇಳು. ಅವನಲ್ಲಿ ನನಗೆ ಸಂಪೂರ್ಣ ನಂಬಿಕೆ ಇದೆ.

ಇತಿ ನಿನ್ನ ಪ್ರೀತಿಯ

ಸ್ಟ್ಯಾನಿಸ್

ಜೂನ್ 4, 1887

"ನಮ್ಮ ಉಳಿತಾಯ ಖಾಲಿಯಾಗಿ ಜೀವನ ನಡೆಯುವುದು ಕಷ್ಟವಾಯಿತು. ಕೆಲವು ಮನೆ ಸಾಮಾನುಗಳನ್ನು ಮಾರಿ ಮತ್ತು ಸೇವಕರನ್ನು ಕೆಲಸದಿಂದ ತೆಗೆದು ಹಾಕಿ ನಮ್ಮ ಸಂಸಾರವನ್ನು ನಡೆಸಿದೆವು. ನನ್ನ ತಾಯಿ ಈ ಕಾಗದ ನೋಡಿದ ಮೇಲೆ ಐದು ವರ್ಷ ಬದುಕಿದ್ದರು. ನಂತರ ಇನ್ನೆರಡು ಕಾಗದಗಳು ಬಂದವು. ಅವುಗಳಿಗೆ ಕಳುಹಿಸಿದವರ ವಿಳಾಸ ಇರಲಿಲ್ಲ. ಆದರೆ, ನನ್ನ ತಾಯಿ ತೀರಿಕೊಂಡ ಮೇಲೆ ಪ್ಯಾರಿಸ್‌ನಿಂದ ಬಂದ ಪತ್ರದಲ್ಲಿ ನನಗೆ ಅನೇಕ ಸಲಹೆಗಳನ್ನು ನೀಡಿದ್ದರು. ಜೊತೆಗೆ, ಮೊಹರು ಹಾಕಿದ ಕೋಣೆಗೆ ಈಗ ಅಷ್ಟೇನೂ ಪ್ರಾಮುಖ್ಯತೆ ಇಲ್ಲವಾದರೂ ನನಗೆ 21 ವರ್ಷವಾಗುವ ವರೆಗೆ ತಾಳು ಎಂದು ಬರೆದಿದ್ದರು. ಇಷ್ಟು ದಿನ ಕಾದಿದ್ದೇನೆ, ಇನ್ನೆರಡು ತಿಂಗಳು ನಾನು ಕಾಯುತ್ತೇನೆ."

"ಎರಡು ತಿಂಗಳು ಯಾಕೆ?"

"ನನ್ನ 21ನೇ ವರ್ಷದ ಹುಟ್ಟುಹಬ್ಬ ಇನ್ನೇನು ಬರಲಿದೆ. ಅಲ್ಲಿಯವರೆಗೆ ನಾನು ತಾಳ್ಮೆಯಿಂದ ಇರುತ್ತೇನೆ. ವಯಸ್ಸಿಗೆ ಬಂದ ತಕ್ಷಣ ಆ ಕೋಣೆಯಲ್ಲಿ ಏನಿದೆ ಅಂತ ನೋಡಿ ನಂತರ ಈ ಮನೆಯಿಂದ ಹೊರಗೆ ಹೋಗುತ್ತೇನೆ."

"ಕಳೆದ ಏಳು ವರ್ಷಗಳಲ್ಲಿ ಷೇರು ಮಾರುಕಟ್ಟೆ ಚೇತರಿಸಿಕೊಂಡಿದೆ; ಆಗ ಅವರು ವಾಪಸ್ಸು ಬರಬಹುದಾಗಿತ್ತಲ್ಲ?"

"ಬಹುಶಃ ಅವರು ಜೀವಂತವಾಗಿರಲಿಲ್ಲ..."

"ನಿನ್ನ ತಾಯಿಯನ್ನು ಅವರು ಜೊತೆಯಲ್ಲಿ ಕರೆದುಕೊಂಡು ಹೋಗಲಿಲ್ಲ ಯಾಕೆ?"

"ನನಗೆ ಗೊತ್ತಿಲ್ಲ."

"ನಿನ್ನ ತಾಯಿ ತೀರಿಕೊಂಡಾಗ ಅವರ ಶವಸಂಸ್ಕಾರಕ್ಕೂ ಬರಲಿಲ್ಲ ಯಾಕೆ?"

"ನನಗೆ ಗೊತ್ತಿಲ್ಲ."

"ಫೀಲಿಕ್ಸ್, ನೋಡು, ನನ್ನ ಪ್ರಕಾರ ನಿನ್ನ ತಂದೆ ಮೇಲೆ ಇನ್ನೇನೋ ಆಪಾದನೆ ಇರಬೇಕು ಅಥವಾ ಇದೆ ಅಂತ ಅವರು ಭಾವಿಸಿರಬೇಕು. ಆದ್ದರಿಂದ ತಲೆಮರೆಸಿಕೊಂಡಿದ್ದಾರೆ."

ಇದನ್ನು ಕೇಳಿ ಫೀಲಿಕ್ಸ್‌ಗೆ ಬೇಜಾರಾಗಿರಬೇಕು, "ಮಿಸ್ಟರ್ ಆಡ್ಲರ್, ನಿಮಗೆ ನನ್ನ ತಂದೆಯ ಪರಿಚಯ ಇದ್ದಿದ್ದರೆ ಈ ಸಂಶಯ ಬರುತ್ತಿರಲಿಲ್ಲ. ಅವರು ಕಣ್ಮರೆ ಆದಾಗ ನಾನಿನ್ನು ಚಿಕ್ಕವನು. ಅವರು ನನ್ನ ಮಾರ್ಗದರ್ಶಿಯಾಗಿದ್ದರು. ಅವರ ಪ್ರಾಮಾಣಿಕತೆ ನನಗೆ ಆಗಲೇ ಗೊತ್ತಿತ್ತು. ನಿಮ್ಮ ಜೊತೆ ಮಾತನಾಡಿದ್ದು ನನಗೆ ಸಮಾಧಾನ ತಂದಿದೆ. ನಿಮಗೆ ಹೊತ್ತಾಗುತ್ತಿದೆ, ನೀವು ಇನ್ನು ಹೊರಡಿ."

"ನನ್ನಿಂದ ಏನಾದರೂ ಸಹಾಯ ಬೇಕಿದ್ದರೆ ಕೇಳು" ಎಂದು ಹೇಳಿ ನನ್ನ

